# ಸ್ನೇಹ ಪವಿತ್ರತೆಯ ಸೂಚಕ ರಾಖಿ

ಹಬ್ಬಗಳ ತವರೂರಾದ ಭಾರತ ದೇಶದಲ್ಲಿ ಹಬ್ಬ ಹರಿದಿನಗಳಿಂದ ಕೂಡಿದ ಶ್ರಾವಣ ಮಾಸಕ್ಕೆ ವಿಶೇಷ ಮಹತ್ವ ಇದೆ. ಶ್ರವಣ, ಪೂಜಾ–ಪಾಠಗಳು, ಧ್ಯಾನ–ಧಾರಣೆಗಳು, ಚಿಂತನೆಗಳ ಮಾಸವೇ ಶ್ರಾವಣ. ನಾಗಚವತಿ, ನಾಗಪಂಚಮಿ, ಶ್ರಾವಣಸೋಮವಾರ, ಶ್ರಾವಣಶುಕ್ರವಾರ, ಗೋಕುಲಾಷ್ಟಮಿ, ನೂಲಹುಣ್ಣಿಮೆ, ಹೀಗೆ ಪ್ರತಿದಿನವು ಹಬ್ಬ. ಈ ಎಲ್ಲ ಹಬ್ಬಗಳಲ್ಲಿ "ನೂಲಹುಣ್ಣಿಮೆ" ಅಥವಾ **'ರಕ್ಷಾಬಂಧನ'** ಒಂದು ಪ್ರಮುಖ ಹಬ್ಬ.

ಭಾರತಿಯರು ನಾವು ವಿದೇಶಿಯರ ಅನುಕರಣೆಯಿಂದ ನಮ್ಮ ನಿಜವಾದ ಸಂಸ್ಕೃತಿಯನ್ನು ಮರೆತು ಸ್ನೇಹ ಅತ್ಮೀಯತೆಯಿಂದ ದೂರ ಹೊಗುತ್ತಿದ್ದೆವೆ. ಇಂದಿನ ಯುವ ಪೀಳಿಗೆ 'ಪ್ರೇಮಿಗಳ ದಿನ' ಕ್ಕೆ ಮಹತ್ವವನ್ನು ನಿಡುತ್ತಿದೆ ಹೊರತು, ಸಹೋದರತ್ವದ ಪವಿತ್ರ ಭಾವನೆಯನ್ನು ಬೆಳೆಸುವ ಸ್ನೇಹದ ಸೂಚಕವಾದ ರಾಖಿಗೆ ಬೆಲೆ ಇಲ್ಲದಂತಾಗಿದೆ. ಮೊಬೈಲ ಮೂಲಕ ಅಶ್ಲೀಲ ಚಿತ್ರ ಹಾಗೂ ಸಂದೇಶಗಳನ್ನು ಕಳಿಸುವ ಪ್ರವೃತ್ತಿ ಮಹಾನಗರಗಳಲ್ಲಿ ಬೆಳೆಯುತ್ತಿದೆ. ಕಾಮುಕ ವೃತ್ತಿಯಿಂದ ಅನೇಕ ನಾರಿಯರು ಇವತ್ತು ಅತ್ಯಾಚಾರ ಅನ್ಯಾಯಕ್ಕೆ ಬಲಿ ಆಗುತ್ತಿದ್ದಾರೆ. ಆಧುನಿಕತೆಯ ವೇಷದಲ್ಲಿ ಸಮಾಜವು ಅಧೋಗತಿಗೆ ಹೋಗುತ್ತಿದೆ. ಪವಿತ್ರತೆಯ ಆಧಾರದಿಂದ ಈ ಪರಿಸ್ಥಿತಿಯನ್ನು ಬದಲಾಯಿಸಬಹುದು. ಪುರುಷರು ನಾರಿಯರನ್ನು ನೋಡುವ ದೃಷ್ಠಿಯು ಪರಿರ್ವತನೆ ಆಗಬೇಕು. ಅವರನ್ನು ಸಬಲೆಯ ರೂಪದಲ್ಲಿ, ದೇವಿಯ ರೂಪಗಳಾದ ಶಕ್ತಿ, ಮಹಾಕಾಳಿ, ದುರ್ಗಾ ಮುಂತಾದ ರೂಪಗಳಲ್ಲಿ ಕಾಣಬೇಕು. 'ಯತ್ರ ನಾರಿಸ್ಯ ಪೂಜ್ಯಂತೆ ರಮಂತೆ ತತ್ರ ದೇವತ:' ಎಂದು ಹೇಳಿಕೆಯನ್ನು ಸಾಕಾರ ಗೊಳಿಸಬೇಕು.

ಇತ್ತೀಚೆಗೆ ನಡೆದ ಪ್ರಾಕೃತಿಕ ಆಪತ್ತಿಗಳಯ, ದಿನನಿತ್ಯ ನಡೆಯುವ ಹಿಂಸಾಚಾರಗಳು, ಅತ್ಯಾಚಾರ ಅನ್ಯಾಯದ ಅನೇಕ ಘಟನೆಗಳಿಂದ ಮಾನವನ ಜೀವನವು ಅಸ್ಥಿರ ಗೊಂಡಿದೆ. ಪರಸ್ಪರ ಸ್ನೇಹ, ಅತ್ಮಿಯತೆಯ ಅವಶ್ಯಕತೆ ಇದೆ. ಒಂದು ಸಮಯದಲ್ಲಿ ಮಾಜಿ ರಾಷ್ಟ್ರಪತಿಗಳಾದ ಡಾ: ಅಬ್ದುಲ ಜೆ. ಕಲಾಮ ಅವರು ಈಶ್ವರೀಯ ವಿಶ್ವವಿದ್ಯಾಲಯದ ಪ್ರಧಾನ ಕೇಂದ್ರ ಆಬು ಪರ್ವತಕ್ಕೆ ಭೆಟಿ ನೀಡಿದಾಗ ಅಲ್ಲಿನ ಕಾರ್ಯಚಟುವಟಿಕೆ ಗಳನ್ನು ನೊಡಿ, ಮುಕ್ತಕಂಠದಿಂದ ಪ್ರಶಂಸಿಸಿ, ಕೆಲವು ಸಲಹೆಗಳನ್ನು ನೀಡಿದರು. 'ನಾವು ಶ್ರೆಷ್ಠ ಸಂಸಾರವಿರುವ ನಾಗರಿಕರನ್ನು ನಿರ್ಮಾಣ ಮಾಡ ಬೇಕು. ಸಂಸ್ಕಾರವಂತ ನಾಗರಿಕರನ್ನು ನಿರ್ಮಾಣ ಮಾಡಲು ಶಕ್ತಿಶಾಲಿ ವಿಶ್ವದ ಸ್ತರದಲ್ಲಿ ಸಂಘಟನೆಯ ಆವಶ್ಯಕತೆ ಇದ್ದು, ಅದರಲ್ಲಿ ಮೂರು ವಿಶೇಷತೆ ಇರಬೇಕು. 1. ಮೌಲ್ಯ ಆಧಾರಿತ ಶಿಕ್ಷಣ, 2. ಧರ್ಮದ ಆಧ್ಯಾತ್ಮಿಕ ಶಕ್ತಿಯಲ್ಲಿ ಪರಿವರ್ತನೆ, 3. ಆರ್ಥಿಕ ಅಸಮಾನತೆಯ ನಿವಾರಣೆ. ಧರ್ಮ ಮತ್ತು ಆಧ್ಯಾತ್ಮಗಳ ನಡುವೆ ಇರುವ ವತ್ಯಾಸನ್ನು ತಿಳಿಸುತ್ತ ಅವರು ಡಾ: ವಿಕ್ರಮ ಸಾರಾಭಾಯಿ ಅವರ ಉದಾಹರಣೆ ನೀಡಿ, ಕೇರಳದಲ್ಲಿ ಅಂತರಿಕ್ಷ ಕೇಂದ್ರದ ಸ್ಥಾಪನೆಯಲ್ಲಿ ಯಾವ ರೀತಿ ಧರ್ಮಾಂಧ ಸಮಾಜವನ್ನು ಪರಿವರ್ತನೆಯಲ್ಲಿ ಆಧ್ಯಾತ್ಮಿಕತೆ ಸಫಲವಾಯಿತು ಎಂದು ಹೇಳಿದರು. ಧರ್ಮದ ಎರಡು ಮುಖಗಳು ಸಿಧ್ಧಾಂತ ಮತ್ತು ಆಧ್ಯಾತ್ಮಿಕತೆ ಆಗಿವೆ. ಸಿದ್ಧಾಂತಗಳಲ್ಲಿ ಹಸ್ತಕ್ಷೇಪ ಮಾಡಲು ಯಾರೂ ಬಿಡುವದಿಲ್ಲ ಆದರೆ ಆಧ್ಯಾತ್ಮಿಕತೆಯಿಂದ ನಾವು ಬೇರೆಯವರನ್ನು ಪರಿವರ್ತನೆ ಮಾಡಬಹುದು. ಮತ್ತು ಧರ್ಮವನ್ನು ಆಧ್ಯಾತ್ಮಿಕ ಶಕ್ತಿಯಾಗಿ ಬೆಳೆಸಬಹುದು.' ಅದರಿಂದಲೆ 'ಧರ್ಮೊ ರಕ್ಷತಿ ರಕ್ಷತ:' ಎಂದು ಹೇಳುತ್ತಾರೆ.

ಸಂಕಟದ ಸಮಯದಲ್ಲಿ ಮಾನವರೆಲ್ಲರೂ ನಾನಾ ಪ್ರಕಾರದ ರಕ್ಷಣೆಯನ್ನು ಬಯಸುತ್ತಾರೆ. 1)ತನುವಿನ ರಕ್ಷಣೆ, 2)ಮನಸ್ಸಿನ ರಕ್ಷಣೆ, 3)ಧನದ ರಕ್ಷಣೆ, 4)ಧರ್ಮ ಪವಿತ್ರತೆಯ ಅಥವಾ ಸತೀತ್ವದ ರಕ್ಷಣೆ, 5) ಅಪತ್ತುಗಳು ಹಾಗೂ ಸಂಕಟಗಳಿಂದ ರಕ್ಷಣೆ, 6)ಕಾಲ ಅಥವಾ ಮೃತ್ಯವಿನ ಪಾಶದಿಂದ ರಕ್ಷಣೆ- ಇವು ಮುಖ್ಯವಾದವು. ಇದರಲ್ಲಿ ತನುವಿನ ರಕ್ಷಣೆಯನ್ನು ಮೃತ್ಯುವು ಸನ್ನಿಹಿತವಾದಾಗ ನಿಗದಿಯಾಗಿರುವ ಮೃತ್ಯುವಿನಿಂದ ರಕ್ಷಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಮನಸ್ಸಿನ ರಕ್ಷಣೆಯನ್ನು ಮಾಯೆಯ ಬಂಧನಗಳಿಂದ ಅಥವಾ ತಾಮಸಿಕ ವಿಕಾರಗಳಿಂದ ಮುಕ್ತನಾಗಲು ಭಗವಂತನಿಗೆ ಶರಣು ಹೋಗಬೇಕಾಗುತ್ತದೆ. ಆದ್ದರಿಂದಲೇ ವಿಷಯ ವಿಕಾರಗಳನ್ನು ನಾಶಮಾಡು, ಪಾಪವನ್ನು ಹರಿಸು ಎಂದು ಪತಿತಪಾವನ, ಪಾಪಕಟೇಶ್ವರನಾದ ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾರೆ. ಧರ್ಮದ, ಪವಿತ್ರತೆಯ ಹಾಗೂ ಸತೀತ್ವದ ರಕ್ಷಣೆಯನ್ನು ಸರ್ವಸಮರ್ಥನಾದ ಭಗವಂತ ಒಬ್ಬನೆ ಮಾಡಲು ಸಾಧ್ಯವಿದೆ. ಇದಕ್ಕೆ ದ್ರೌಪದಿಯ ದೃಷ್ಟಾಂತವಿದೆ. ಕಾಲ ಅಥವಾ ಯಮನ ಪಾಶದಿಂದ ಪಾರು ಮಾಡುವವನೂ, ಕಾಲರಕಾಲ ಮಹಾಕಾಲ ಮಹಾಕಾಳೇಶ್ವರನೇ ಆಗಿದ್ದಾನೆ. ಯಾರನ್ನು ಈಶ್ವರನು ರಕ್ಷಣೆ ಮಾಡುತ್ತಾನೋ ಅವರಿಗೆ ಇಡೀ ಪ್ರಪಂಚವೇ ವೈರಿಯಾದರೂ ಅವರ ಕೂದಲನ್ನೂ ಕೊಂಕಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಭಕ್ತ ಮಾರ್ಕಂಡೇಯನ ದೃಷ್ಟಾಂತವಿದೆ. ಸಾಂಸಾರಿಕ ಆಪತ್ತುಗಳು ಆಥವಾ ಲೌಕಿಕ ಸಂಕಟಗಳಿಂದಲೂ ರಕ್ಷಣೆಯನ್ನು ಈಶ್ವರನು ಹೊರತು ಅನ್ಯಯಾರಿಂದಲೂ ಸಾಧ್ಯವಿಲ್ಲ. ಅದ್ದರಿಂದಲೇ ಅವನಿಗೆ ದುಃಖಹರ್ತಾ, ಸುಖಕರ್ತಾ, ವಿಘ್ನವಿನಾಶಕ ಎಂದು ಕರೆಯುತ್ತಾರೆ.

ಸಕಲಜೀವರಾಶಿಗಳಿಗೆ ಲೇಸನ್ನು ಬಯಸುವ, ಸಬಕಾ ಮಾಲಿಕ ಎಕ್ ನಾಗಿರುವ, ಸರ್ವರ ರಕ್ಷಕ ಭಗವಂತನ ಜೊತೆಗೆ ಸಂಬಂಧದ ಬಂಧನವೇ **ರಕ್ಷಾಬಂಧನ** . ಅವನನ್ನು ತಿಳಿದು, ಅವನನ್ನೆ ನೆನೆಯುತ್ತಾ, ನಾವೆಲ್ಲರೂ ಅವನ ಮಕ್ಕಳು ಎಂದು ನಡೆದಾಗ 'ವಸುಧೈವ ಕುಟುಂಬಕಂ' ಆಗುವುದು. ನಾವು ಎಲ್ಲರು ಭಗವಂತನ ಮಕ್ಕಳು ಸಹೋದರ ಸಹೋದರಿಯರು. ನಮ್ಮ ಪವಿತ್ರ ಸ್ನೇಹದ ಸೂಚಕವೇ **ರಾಖಿ**. ಈ ಹಬ್ಬದಲ್ಲಿ ಸಹೋದರಿ ಸಹೋದರನಿಗೆ ರಾಖಿ ಕಟ್ಟಿ ಮಸ್ತಕದಲ್ಲಿ ತಿಲಕವನ್ನಿಟ್ಟು ಬಾಯಿಯನ್ನು ಸಿಹಿ ಮಾಡುತ್ತಾಳೆ. ಇದರ ಪ್ರತಿಯಾಗಿ ಸಹೋದರನು ಕಾಣಿಕೆಯನ್ನು ಕೊಡುತ್ತಾನೆ. ಮಸ್ತಕದಲ್ಲಿ ಇಡುವ ತಿಲಕ ಅತ್ಮಜ್ಯೋತಿಯ ಪ್ರತೀಕ, ಬಾಯಿ ಸಿಹಿ ಮಾಡುವುದೆಂದರೆ ಮಧುರವಾದ ನುಡಿಗಳನ್ನು ನುಡಿಯುವುದು, ರಾಖಿಯಲ್ಲಿ ಇರುವ ದಾರವು ನಿಯಮ ಹಾಗು ಸಂಯಮದ ಸೂಚಕ, ದುರ್ಗುಣ, ದುಶ್ಚಟಗಳನ್ನು ಬಿಡುವುದು ಕಾಣಿಕೆಯ ಅರ್ಥವಾಗಿದೆ. ಹಾಗಾದರೆ ಬನ್ನಿ ನಾವೆಲ್ಲರೂ ಶ್ರೀರಕ್ಷೆಯಲ್ಲಿ ಬಂಧಿತರಾಗಿ ಇತರ ಅನೇಕ ಬಂಧನಗಳನ್ನು ಸ್ನೇಹದ ಸಂಬಂಧದಲ್ಲಿ ಪರಿವರ್ತಿತಿಸಿ, ಜಾತಿ, ಮತ, ಭಾಷಾ. ಭೇದಗಳನ್ನು ಮರೆತು, ಸಹೋದರತ್ವದ ಭಾವನೆಯಿಂದ ಜೀವನದಲ್ಲಿ ಸುಖ-ಶಾಂತಿಯನ್ನು ಪಡೆಯೋಣ.

***---ವಿಶ್ವಾಸ ಸೋಹೋನಿ. ಧಾರವಾಡ***

- ब्रह्माकुमारीज् वार्ता फिचर्स

www.bkvarta.com